ಪ್ರಾರ್ಥನೆ

# ಶ್ರೀಶಾರದಾದೇವೀ ಸ್ತೋತ್ರಮ್ – ೩

**ಜ್ಞಾನಭಕ್ತಿಮಿಶ್ರಪೂರ್ಣಶೌರ್ಯವೀರ್ಯದಾಯಿಕಾಂ**
**ಕ್ಲೈಬ್ಯಮೋಹದೀನಹೀನಭೀತಿಭಾವನಾಶಿಕಾಮ್ ।**
**ದೃಷ್ಟವಿಶ್ವರಾಮಕೃಷ್ಣಭಾವಪೂತನಂದಿತಾಂ**
**ತಾಂ ನಮಾಮಿ ಶಾರದಾಂ ಹಿ ವಿಶ್ವಮಾತೃರೂಪಿಣೀಮ್ ॥ ೭ ॥**

ಜ್ಞಾನಭಕ್ತಿಗಳೊಡಗೂಡಿದ ಶೌರ್ಯಪರಾಕ್ರಮಗಳನ್ನು ಕರುಣಿಸುವ, ಅಂಜುಗುಳಿತನ, ಮೋಹ ದೈನ್ಯ, ಭಯ ಮೊದಲಾದ ಹೀನ ಭಾವಗಳನ್ನೆಲ್ಲಾ ದೂರೀಕರಿಸುವ, ವಿಶ್ವದೆಲ್ಲೆಡೆ ವ್ಯಾಪಿಸಿರುವ ಶ್ರೀರಾಮಕೃಷ್ಣಭಾವವನ್ನು ಕಂಡು ಆನಂದಿಸುವ, ವಿಶ್ವಕ್ಕೇ ಮಾತೃರೂಪಿಣಿಯಾಗಿರುವ ಶಾರದೆಗೆ ನಮಸ್ಕರಿಸುತ್ತೇನೆ.

**ಸರ್ವಸಂಪ್ರದಾಯಹೀನಸತ್ಯಧರ್ಮದೇಶಿನೀಮ್**
**ದೇಶಕಾಲಜಾತಿಮಧ್ಯತುಚ್ಛಭಾವನಾಶಿನೀಮ್ ।**
**ದೇಶಪೂಜ್ಯಕಾಲಪೂಜ್ಯಕಾರ್ಯಹೇತುವರ್ಜಿತಾಂ**
**ತಾಂ ನಮಾಮಿ ಶಾರದಾಂ ಹಿ ವಿಶ್ವಮಾತೃರೂಪಿಣೀಮ್ ॥ ೮ ॥**

ಎಲ್ಲಾ ಸಂಪ್ರದಾಯಗಳೂ ನಶಿಸಿಹೋಗುವ ಸ್ಥಿತಿಗೆ ಇಳಿದಾಗ ಅವುಗಳ ನಿಜ ಸ್ವರೂಪವನ್ನೂ ಧರ್ಮವನ್ನೂ ಲೋಕಕ್ಕೆ ತಿಳಿಸಿಕೊಟ್ಟ, ದೇಶದಲ್ಲಿ ಆ ಕಾಲದಲ್ಲಿ ವ್ಯಾಪಕವಾಗಿ ಹರಡಿದ್ದ ಜಾತಿಭೇದ ಭಾವಗಳನ್ನು ಅಳಿಸಿಹಾಕಿದ, ಪೂಜ್ಯತೆಗೆ (ಜಪ ದೀಕ್ಷಾ ಮೊದಲಾದ ಪೂಜ್ಯಕ್ರಿಯೆಗಳಿಗೆ) ವಿಧಿಸಿದ್ದ ದೇಶಕಾಲ ನಿರ್ಬಂಧ ಮೊದಲಾದ ನಿಮಿತ್ತಗಳನ್ನು ದೂರೀಕರಿಸಿದ್ದ, ವಿಶ್ವಜನನಿ ಮಾತೆ ಶಾರದೆಗೆ ನಮಸ್ಕರಿಸುತ್ತೇನೆ.

**ಆದ್ಯಶಕ್ತಿದಿವ್ಯಮೂರ್ತಿಹೃದ್ಯಶಾಂತಿದಾಯಿನೀಮ್**
**ವೇದಮೂರ್ತಿಸತ್ಯಮೂರ್ತಿಕಲ್ಪವಲ್ಲಿರೂಪಿಣೀಮ್।**
**ಭಕ್ತಸೂನುಚಿತ್ತನಿತ್ಯವಿತ್ತವೃದ್ಧಿಕಾರಿಣೀಮ್**
**ತಾಂ ನಮಾಮಿ ಶಾರದಾಂ ಹಿ ವಿಶ್ವಮಾತೃರೂಪಿಣೀಮ್ ॥ ೯ ॥**

ಆದ್ಯಾಶಕ್ತಿ ಸ್ವರೂಪಿಣಿಯಾಗಿ ತನ್ನ ದಿವ್ಯಸಾನ್ನಿಧ್ಯದಿಂದ ಹೃದಯಕ್ಕೆ ಶಾಂತಿಯನ್ನು ಕರುಣಿಸುವ, ಸ್ವಯಂ ವೇದರೂಪಿಣಿಯೂ ಸತ್ಯಮೂರ್ತಿಯೂ ಆಗಿ ಭಕ್ತರ ಕಾಮನೆಗಳನ್ನು ಪೂರೈಸುವ ಕಲ್ಪವೃಕ್ಷವಾಗಿರುವ, ಭಕ್ತರೂಪೀ ಮಕ್ಕಳ ಮನದ ಸಂತೋಷ ಎಂಬ ಸಂಪತ್ತನ್ನು ನಿತ್ಯವೂ ವೃದ್ಧಿಗೊಳಿಸುವ, ಲೋಕಕ್ಕೆ ತಾಯಿ ಎನಿಸಿರುವ ಶಾರದೆಗೆ ವಂದಿಸುತ್ತೇನೆ.

**ಸರ್ವಭೀತಿನಾಶಿನೀಂ ಚ ಪಾಪಪುಣ್ಯಕಾರಿಣೀಮ್**
**ಸೂಪದೇಶದಾಯಿನೀಂ ಚ ಶೋಕಮೋಹತಾರಿಣೀಂ ।**
**ರಾಮಕೃಷ್ಣಭಾವಯುಕ್ತಸರ್ವಸಿದ್ಧಿದಾಯಿನೀಮ್**
**ತಾಂ ನಮಾಮಿ ಶಾರದಾಂ ಹಿ ವಿಶ್ವಮಾತೃರೂಪಿಣೀಮ್ ॥ ೧೦ ॥**

ಸಕಲರ ಸರ್ವವಿಧ ಭಯಗಳನ್ನೂ ದೂರಮಾಡುವ, ಪಾಪಗಳನ್ನೆಲ್ಲಾ ಪುಣ್ಯವಾಗಿ (ಭಾವಿಸುವ ಅಥವಾ) ಪರಿವರ್ತಿಸಬಲ್ಲ, ಉತ್ತಮವಾದ ಉಪದೇಶಗಳನ್ನು ನೀಡಿ ಅದರ ಮೂಲಕ ಜನರು ತಮ್ಮ ಶೋಕ ಮೋಹಗಳನ್ನು ಕಳೆದುಕೊಳ್ಳುವಂತೆ ಮಾಡುವ, ರಾಮಕೃಷ್ಣಭಾವದೊಡಗೂಡಿದವರಿಗೆ ಎಲ್ಲಾ ಸಿದ್ಧಿಗಳನ್ನೂ ಅನುಗ್ರಹಿಸುವ, ಲೋಕಮಾತೆ ತಾಯಿ ಶಾರದೆಗೆ ನಮಿಸುವೆ.

— ಸ್ವಾಮಿ ಜೀವಾನಂದ

ಸೂಕ್ತಿಪ್ರಭ

## ನೈತಿಕ ಸೂಕ್ತಿಗಳು

ಹೊನ್ನು ಮಾಯೆಯೆಂಬರು, ಹೊನ್ನು ಮಾಯೆಯಲ್ಲ.
ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ.
ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ.
ಮನದ ಮುಂದಣ ಆಶೆಯೇ ಮಾಯೆ ಕಾಣಾ ಗುಹೇಶ್ವರ.

— ಅಲ್ಲಮ ಪ್ರಭು

**ತಸ್ಮಾತ್ ಸರ್ವೇಷು ಭೂತೇಷು ದಯಾಂ ಕುರುತ ಸೌಹೃದಂ**
**ಆಸುರಂ ಭಾವಮುನ್ಮುಚ್ಯ ಯಯಾ ತುಷ್ಯತ್ಯಧೋಕ್ಷಜಃ ॥**

ಎಲ್ಲಾ ಪ್ರಾಣಿಗಳಲ್ಲಿಯೂ ದಯೆಯನ್ನೂ ಮೈತ್ರಿಯನ್ನೂ ಇಡಿ. ರಾಕ್ಷಸ ಭಾವನೆಯನ್ನು ಬಿಟ್ಟರೆ, ಪರಮಾತ್ಮನು ಸಂತೋಷಪಡುತ್ತಾನೆ.

— ಭಾಗವತ

ಏನನ್ನೂ ಮರಳಿ ಪಡೆಯದಿದ್ದರೂ, ಒಳ್ಳೆಯ ಕೆಲಸ ಮಾಡಲು ನಮಗೆ ಉಂಟಾಗುವ ಆಂತರಿಕ ಬಯಕೆಯೇ ಅನುಕಂಪ. ಇವನ್ನು ಮಾಡುವುದೇ ನಮ್ಮ ಜೀವನದಲ್ಲಿ ಅತಿ ಆನಂದಕರವಾದ ಕಾರ್ಯ. ಈ ಬಗೆಯ ಬಯಕೆಯಿಂದ ಪ್ರೇರಿತರಾಗಿ ನಾವು ಸತ್ಕರ್ಮಗಳನ್ನು ಮಾಡಿದಾಗ, ನಾವು ಯೋಚಿಸುವ, ಮಾತನಾಡುವ, ಬಯಸುವ, ಹಾಗೂ ಮಾಡುವ ಪ್ರತಿಯೊಂದರಲ್ಲೂ ಅದೇ ಅನುಕಂಪವಿರುತ್ತದೆ.

— ಇಮ್ಯಾನುವೆಲ್ ಸ್ವೀಡನ್‌ಬೋರ್ಗ್

ಎಷ್ಟು ನೀಡಿದೆ ಎಂಬುದರಲ್ಲಲ್ಲ ಉದಾರತೆ ಇರುವುದು ; ಯಾವ ಭಾವದಿಂದ ನೀಡಿದೆ ಎಂಬುದರಲ್ಲಿ.

—ಅಜ್ಞಾತ